ಕೃಷಿ ಮಾರುಕಟ್ಟೆಗಳಲ್ಲಿ ಉಗ್ರಾಣ ಮತ್ತು ಕೋಲ್ಡ್‌ಸ್ಟೋರೆಜ್ ನಿರ್ಮಿಸುವುದು

699(1298); ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಮಧುಗಿರಿ)

ಅ) ತುಮಕೂರು ಜಿಲ್ಲೆಯಲ್ಲಿರುವ ಕೃಷಿ ಮಾರುಕಟ್ಟೆಗಳ ಸಂಖ್ಯೆ ಎಷ್ಟು; (ತಾಲ್ಲುಕುವಾರು ಮಾಹಿತಿ ನೀಡುವುದು)

ಆ) ಈ ಕೃಷಿ ಮಾರುಕಟ್ಟೆಗಳಲ್ಲಿ ಕೃಷಿ ಉತ್ಪನ್ನಗಳನ್ನು ದಾಸ್ತಾನು ಮಾಡಲು ಸೂಕ್ತ ಉಗ್ರಾಣಗಳು ಇವೆಯೇ; ವಿವರ ನೀಡುವುದು;

ಇ) ಉಗ್ರಾಣಗಳಿಲ್ಲದಿದ್ದಲ್ಲಿ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಬಹು ಬೇಗ ಕೆಡುವ ಕೃಷಿ ಉತ್ಪನ್ನಗಳನ್ನು ದಾಸ್ತಾನು ಮಾಡಲು ಕೋಲ್ಡ್ ಸ್ಟೋರೇಜ್‌ಗಳನ್ನು ಯಾವ ಯಾವ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ; ಇಲ್ಲದಿದ್ದಲ್ಲಿ, ಯಾವಾಗ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು; (ವಿವರ ನೀಡುವುದು)

ಡಾ॥ ಶಾಮನೂರು ಶಿವಶಂಕರಪ್ಪ (ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು)

ಅ)

ಮಾರುಕಟ್ಟೆ ಸಮಿತಿ	ಸಮಿತಿಯ ಕಾರ್ಯಕ್ಷೇತ್ರ (ತಾಲ್ಲೂಕು)
ತುಮಕೂರು	ತುಮಕೂರು, ಕೊರಟಗೆರೆ
ಗುಬ್ಬಿ	ಗುಬ್ಬಿ
ಹುಳಿಯಾರು	ಚಿಕ್ಕನಾಯಕನಹಳ್ಳಿ
ಕುಣಿಗಲ್	ಕುಣಿಗಲ್
ಮಧುಗಿರಿ	ಮಧುಗಿರಿ
ಪಾವಗಡ	ಪಾವಗಡ
ಸಿರಾ	ಸಿರಾ
ತುರುವೇಕೆರೆ	ತುರುವೇಕೆರೆ
ತಿಪಟೂರು	ತಿಪಟೂರು

ಆ) ಮತ್ತು ಇ) ವಿವರ ಅನುಬಂಧ–1 ರಲ್ಲಿ ನೀಡಿದೆ.

ಈ) ಶೀತಲೀಕರಣ ಘಟಕಗಳ ಸ್ಥಾಪನೆಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಪ್ರಾಂಗಣಗಳಲ್ಲಿ ನಿವೇಶನಗಳನ್ನು ಶೇಕಡಾ 50 ರ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಲು ಆಸ್ತಿ ಹಂಚಿಕೆ ನಿಯಮಾವಳಿ 2004 ರಲ್ಲಿ ಅವಕಾಶಿಸಿದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು, ಹಣ್ಣು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ, ಮೈಸೂರು ಇಲ್ಲಿ ಶೀಥಲ ಗೃಹ ನಿರ್ಮಾಣಕ್ಕೆ ಅವಕಾಶಿಸಲಾಗಿದೆ.

ಕರ್ನಾಟಕ ಉಗ್ರಾಣ ಕಾಯ್ದೆ 1961ರಡಿಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಮಾರುಕಟ್ಟೆ ಕ್ಷೇತ್ರದಲ್ಲಿ ಖಾಸಗಿಯವರು ಶೀತಲಗೃಹಗಳನ್ನು ನಿರ್ಮಿಸಿ ಲೈಸೆನ್ಸ್ ಪಡೆದಿರುವವರ ವಿವರ ಅನುಬಂಧ–2 ರಲ್ಲಿ ನೀಡಿದೆ.

ಅನುಬಂಧ-1

ಗೋದಾಮುಗಳ ವಿವರ	
ತುಮಕೂರು	ತುಮಕೂರು ಸಮಿತಿಯಿಂದ 200 ಮೆ.ಟನ್ ಸಾಮರ್ಥ್ಯದ 2 ಗೋದಾಮು ಮತ್ತು 359 ಮೆ.ಟನ್ ಸಾಮರ್ಥ್ಯದ ಆರ್.ಕೆ.ವಿ.ವೈ ಗೋದಾಮು ಒಟ್ಟು 3 ಗೋದಾಮುಗಳು.
ತಿಪಟೂರು	ಉಗ್ರಾಣ ಆಧಾರಿತ ಕೊಬ್ಬರಿ ಮಾರಾಟಕ್ಕಾಗಿ 150 ಮೆ.ಟನ್ ಗೋದಾಮು ಕಾಯ್ದಿರಿಸಲಾಗಿದೆ. ಕೊನೆಹಳ್ಳಿ ಉಪ ಮಾರುಕಟ್ಟೆಯಲ್ಲಿ ಆರ್ ಕೆ.ವಿ.ವೈ ಯೋಜನೆಯಡಿಯಲ್ಲಿ 1000 ಮೆ.ಟನ್ ಸಾಮರ್ಥ್ಯದ ಗೋದಾಮು ನಿರ್ಮಾಣಕ್ಕೆ ಕ್ರಮ ಜರುಗಿಸಿದೆ.
ಗುಬ್ಬಿ	ಗುಬ್ಬಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 4 ಗೋದಾಮುಗಳು (ಪ್ರತಿಗೋದಾಮು 200 ಮೆ. ಟನ್ ಸಾಮರ್ಥ್ಯ) ಮತ್ತು ಬೇಳೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ 400 ಮೆ.ಟನ್ ಸಾಮರ್ಥ್ಯದ 1 ಗೋದಾಮು ಇರುತ್ತದೆ.
ಸಿರಾ	4 ಸಂಖ್ಯೆ ಗೋದಾಮುಗಳನ್ನು ರೈತರಿಗಾಗಿ ಕಾಯ್ದಿರಿಸಿದೆ. 2014-15ನೇ ಸಾಲಿನ ಯೋಜನೆಯಡಿಯಲ್ಲಿ 5000 ಮೆ.ಟನ್ ಸಾಮರ್ಥ್ಯದ 1 ಸಂಖ್ಯೆ ವೈಜ್ಞಾನಿಕ ಗೋದಾಮು ನಿರ್ಮಾಣ ಕಾಮಗಾರಿ ಮಂಜೂರಾಗಿದ್ದು, ಕಾಮಗಾರಿ ಪ್ರಾರಂಭದ ಹಂತದಲ್ಲಿದೆ.
ತುರುವೇಕೆರೆ	ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ವತಿಯಿಂದ 2000 ಮೆ.ಟನ್ ಸಾಮರ್ಥ್ಯದ ಉಗ್ರಾಣ ಕಟ್ಟಡ ಇದೆ.
ಹುಳಿಯಾರು	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 500ಮೆ.ಟನ್ ಸಾಮರ್ಥ್ಯದ ಎರಡು ಸಣ್ಣ ಗೋದಾಮು ಹಾಗೂ ಚಿ.ನಾ.ಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ 200 ಮೆ.ಟನ್ ಸಾಮರ್ಥ್ಯದ ಗೋದಾಮು ಇರುತ್ತದೆ.
ಮಧುಗಿರಿ	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 300 ಮೆ.ಟನ್ ಸಾಮರ್ಥ್ಯದ ಒಂದು ದೊಡ್ಡ ಗೋದಾಮನ್ನು ಕಾಯ್ದರಿಸಿದೆ ಹಾಗೂ ಆರ್.ಐ.ಡಿ.ಎಫ್-20 ಯೋಜನೆಯಡಿ 200 ಮೆ.ಟನ್ ಗೋದಾಮು ನಿರ್ಮಿಸಲು ಯೋಜನಾ ವರದಿಯನ್ನು ನಬಾರ್ಡ್ ಸಂಸ್ಥೆಗೆ ಸಲ್ಲಿಸಿದ್ದು, ಅನುಮೋದನೆ ನಿರೀಕ್ಷಿಸಿದೆ.
ಕುಣಿಗಲ್	400 ಮೆ.ಟನ್. ಸಾಮರ್ಥ್ಯದ ಗೋದಾಮನ್ನು ಕಾಯ್ದಿರಿಸಲಾಗಿದೆ.
ಪಾವಗಡ	2013-14ನೇ ಸಾಲಿನಲ್ಲಿ 100 ಮೆ.ಟನ್ ಸಾಮರ್ಥ್ಯದ ಗೋದಾಮನ್ನು ನಿರ್ಮಿಸಲು ಕ್ರಮ ಜರುಗಿಸಿದ್ದು, ಪ್ರಗತಿಯಲ್ಲಿದೆ ಹಾಗೂ ರೈತರಿಗಾಗಿ 200 ಮೆ.ಟನ್ ಸಾಮರ್ಥ್ಯದ 2 ಗೋದಾಮುಗಳನ್ನು ಕಾಯ್ದಿರಿಸಿದೆ.

ಅನುಬಂಧ-2

ಕರ್ನಾಟಕ ಉಗ್ರಾಣ ಕಾಯ್ದೆ 1961 ರಡಿಯಲ್ಲಿ ಲೈಸೆನ್ಸ್ ಪಡೆದಿರುವ ಶೀಥಲ ಗೃಹಗಳ ವಿವರ:

ಶೀಥಲಗೃಹದ ಲೈಸೆನ್ಸ್‌ದಾರರ ಹೆಸರು	ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪ್ತಿ	ಸಾಮರ್ಥ್ಯ Cu.Mt
ವಿಘ್ನೇಶ್ವರ ಕೋಲ್ಡ್ ಸ್ಟೋರೇಜ್ ಪ್ರೈ ಲಿ.,	ಬ್ಯಾಡಗಿ	24848.24
ಗೌರಿಶಂಕರ ಕೋಲ್ಡ್ ಸ್ಟೋರೇಜ್ ಪ್ರೈ ಲಿ.,	ಬ್ಯಾಡಗಿ	24848.24
ಶ್ರೀ ಸೋಮೇಶ್ವರ ಕೋಲ್ಡ್ ಸ್ಟೋರೇಜ್ ಪ್ರೈ ಲಿ.,	ಬ್ಯಾಡಗಿ	35237.34
ಶ್ರೀ ವಿಘ್ನೇಶ್ವರ ಕೋಲ್ಡ್ ಸ್ಟೋರೇಜ್ ಪ್ರೈ ಲಿ.,	ಬ್ಯಾಡಗಿ	24848.24
ಶ್ರೀ ಎಸ್.ವಿ.ಕೋಲ್ಡ್ ಸ್ಟೋರೇಜ್ ಪ್ರೈ ಲಿ.,	ಬ್ಯಾಡಗಿ	27348.03
ಶ್ರೀ ಸಿದ್ದಲಿಂಗೇಶ್ವರ ಕೋಲ್ಡ್ ಸ್ಟೋರೇಜ್ ಪ್ರೈ ಲಿ.,	ಬ್ಯಾಡಗಿ	24848.24
ಶ್ರೀ ವೀರಭದ್ರೇಶ್ವರ ಕೋಲ್ಡ್ ಸ್ಟೋರೇಜ್ ಪ್ರೈ ಲಿ.,	ಬ್ಯಾಡಗಿ	22681.47
ಶ್ರೀ ಅಂಜನಾದ್ರಿ ಕೋಲ್ಡ್ ಸ್ಟೋರೇಜ್ ಪ್ರೈ ಲಿ.,	ಬ್ಯಾಡಗಿ	18968.60
ಶ್ರೀ ಕೇದಾರ ಕೋಲ್ಡ್ ಸ್ಟೋರೇಜ್ ಪ್ರೈ ಲಿ.,	ಬ್ಯಾಡಗಿ	19877.18
ಶ್ರೀ ವೈಯಾಗ ಕೋಲ್ಡ್ ಸ್ಟೋರೇಜ್ ಪ್ರೈ ಲಿ.,	ಬ್ಯಾಡಗಿ	19877.18
ರಾಯಚೂರು ಕೋಲ್ಡ್ ಸ್ಟೋರೇಜ್ ಪ್ರೈ ಲಿ.,	ರಾಯಚೂರು	21375.64
ರೈತಮಿತ್ರ ಕೋಲ್ಡ್ ಸ್ಟೋರೇಜ್ ಪ್ರೈ ಲಿ.,	ರಾಯಚೂರು	23000.50
ಹುಬ್ಬಳ್ಳಿ ಕೋಲ್ಡ್ ಸ್ಟೋರೇಜ್ ಪ್ರೈ ಲಿ.,	ಹುಬ್ಬಳ್ಳಿ	44815.83
ಶ್ರೀ ಶಾರದಾ ಗಣಪತಿ ಕೋಲ್ಡ್ ಸ್ಟೋರೇಜ್ ಪ್ರೈ ಲಿ.,	ಚಳ್ಳಕೆರೆ	15614.14
ಉಷಾ ಕೋಲ್ಡ್ ಸ್ಟೋರೇಜ್ ಪ್ರೈ ಲಿ.,	ಶಹಾಪುರ	21404.56
ಗುಲ್ಬರ್ಗಾ ಕೋಲ್ಡ್ ಸ್ಟೋರೇಜ್ ಪ್ರೈ ಲಿ.,	ಗುಲ್ಬರ್ಗಾ	17080.00
ಮಹೇಶ ಕೋಲ್ಡ್ ಸ್ಟೋರೇಜ್ ಪ್ರೈ ಲಿ.,	ಸಿಂಧನೂರು	22280.44
ವಿಶ್ವನಾಥ್ ರೆಡ್ಡಿ ಅಂಡ್ ಕೋ., ಕೋಲ್ಡ್ ಸ್ಟೋರೇಜ್	ರಾಯಚೂರು	26210.28